O.S. ನಂಬರಃ 68/2017

ಪಿ. ಡಬ್ಲ್ಯೂಃ 1

ದಿಃ 18-08-2023 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಜಿ.ಎನ್.ಎನ್.ವಕೀಲರಿಂದಃ

ನನ್ನ ಮನೆ ಅಂಕೋಲಾದ ಕಾಕರಮಠದಲ್ಲಿದೆ. ನಾನು ಮೆಟ್ರಿಕವರೆಗೆ ಓದಿದ್ದೇನೆ. ನನ್ನ ಶಿಕ್ಷಣ ಗೋವಾದ ಮಡಗಾಂವದಲ್ಲಿ ಆಗಿರುತ್ತದೆ. 1973 ರಲ್ಲಿ ಅಂಕೋಲಾಕ್ಕೆ ಬಂದು ವಾಸ್ತವ್ಯ ಇರುತ್ತೇನೆ. ಆ ಸಮಯದಲ್ಲಿ ನನಗೆ 16-17 ವರ್ಷ ವಯಸ್ಸಾಗಿತ್ತು. ನನ್ನ ತಂದೆಯ ಟ್ರಾನ್ಸಪೋರ್ಟ ವ್ಯವಹಾರ ನೋಡಿಕೊಳ್ಳುತ್ತಿದ್ದೆ. ಆ ನಂತರದಲ್ಲಿ ಫರ್ನಿಚರ್ ವ್ಯಾಪಾರ ಹಾಗೂ ಸರ್ಕಾರದ ಗುತ್ತಿಗೆ ಕೆಲಸವನ್ನು ಮಾಡುತ್ತಿದ್ದೇನೆ. ಸಮಾಜಸೇವೆ ಮಾಡುವಂತಹ ನಾರ್ತ ಕೆನರಾ ಮುಸ್ಲಿಂ ಯುನೈಟೆಡ್ ಫರ್ಮ್ ನಲ್ಲಿ ತಾಲೂಕಾ ಮೆಂಬರ್ ಇದ್ದೇನೆ. ಸದರಿ ಸಮಾಜಸೇವೆ ಸಂಸ್ಥೆಯ ವತಿಯಿಂದ ಬಡಮಕ್ಕಳ ಶಾಲಾ ಶುಲ್ಕ ಭರಿಸುವುದು, ವೈಧ್ಯಕೀಯ ಖರ್ಚು ಹಾಗೂ ಇತರ ಕೆಲಸ ಕಾರ್ಯಗಳನ್ನು ಮಾಡುತ್ತಿರುತ್ತೇನೆ. ಸಮಾಜ ಸೇವೆ ಸಂಘ ಸಂಸ್ಥೆಗಳ ಮೆಂಬರ್ ಇರುವುದರ ಕುರಿತು ಕಾಗದ ಪತ್ರ ವ, ವೈಯಕ್ತಿಕ ಸಮಾಜಸೇವೆ ಮಾಡಿದ ಬಗ್ಗೆ ಇರುವ ಕಾಗದ ಪತ್ರಗಳನ್ನು ಈ ನ್ಯಾಯಾಲಯಕ್ಕೆ ನೀಡಿಲ್ಲ, ಆದರೆ ಅವುಗಳ ಕುರಿತು ರಶೀದಿಗಳು ನನ್ನ ಬಳಿ ಇರುತ್ತವೆ. ನನ್ನ ಬಳಿ ರಶೀದಿಗಳು ಇರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮೇಲೆ 15-20 ಕ್ರಿಮಿನಲ್ ಪ್ರಕರಣ ಇರಬಹುದಾ ಎಂದರೆ ಸಾಕ್ಷಿ ಒಂದು ಮಾತ್ರ ಇದ್ದು, ಅದು ಈ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದೆ ಎಂದು ಹೇಳುತ್ತಾರೆ. ಸದರಿ ಕ್ರಿಮಿನಲ್ ಪ್ರಕರಣವನ್ನು ಅಂಜುಮನ್ ಸಂಸ್ಥೆಯ ಹಣ ದುರ್ಬಳಕೆ ಮಾಡಿದ ವ್ಯಕ್ತಿಗಳ ವಿರುದ್ಧ ದಾಖಲಾದ ಬೇರೆ ಪ್ರಕರಣದ ವ್ಯಕ್ತಿಗಳು ನಮ್ಮ ವಿರುದ್ಧ ವಿನಾಕಾರಣ ಪ್ರಕರಣ ಸಲ್ಲಿಸಿರುತ್ತಾರೆ. ಸದರಿ ಪ್ರಕರಣ 2017 ರಲ್ಲಿ ದಾಖಲಾಗಿದೆ. ಸದರಿ ಪ್ರಕರಣ ಹೊರತುಪಡಿಸಿ, ಬೇರೆ ಯಾವುದೇ ಪ್ರಕರಣ ದಾಖಲಾಗಿಲ್ಲ, ಸಾಕ್ಷಿ ಮುಂದುವರೆದು ನಾನು ಅವರ ಮೇಲೆ ಮಾನಹಾನಿ ಕುರಿತು 2 ಸಿವಿಲ್ ಪ್ರಕರಣ ಸಲ್ಲಿಸಿದ್ದೇನೆ ಎಂದು ಹೇಳುತ್ತಾರೆ.

ಅಂಕೋಲಾ ಪಿ.ಎಸ್.ಕ್ರೈಂ ನಂ. 215/2013 ನ್ನು ನೂರುದ್ದೀನ್ ಶೇಖ ಎಂಬುವವರು ದಾಖಲಿಸಿದ್ದರು ಎಂದರೆ ಸಾಕ್ಷಿ, ಆ ಕುರಿತು ಪ್ರತಿ ಪ್ರಕರಣವನ್ನು ನಮ್ಮ ಕಡೆಯಿಂದ ಸಲ್ಲಿಸಿದ್ದು, ಕೊನೆಗೆ ರಾಜಿ ಆಗಿ ಎರಡೂ ಪ್ರಕರಣಗಳು ಮುಕ್ತಾಯಗೊಂಡಿರುತ್ತವೆ ಎಂದು ಹೇಳುತ್ತಾರೆ. ಸದರಿ ನಮ್ಮ ಮೇಲಾದ ಪ್ರಕರಣ ಹೊಡೆದಾಟದ ಕುರಿತಾಗಿತ್ತು ಎಂದರೆ ಸಾಕ್ಷಿ, ಅಂಗಡಿ ವ್ಯಾಪಾರದ ಭಿನ್ನಾಭಿಪ್ರಾಯದ ಸಲುವಾಗಿ ಪ್ರಕರಣ ದಾಖಲಾಗಿದ್ದು, ಅದು ಮುಕ್ತಾಯವಾಗಿದೆ ಎಂದು ಹೇಳುತ್ತಾರೆ. ಆ ಸಮಯದಲ್ಲಿ ನಾನು ಅಂಜುಮನ್ ಸಂಸ್ಥೆಯ ಕಟ್ಟಡದ ಬಾಡಿಗೆಯಲ್ಲಿ ಅಂಗಡಿ ನಡೆಸುತ್ತಿದ್ದೆ ಎಂದರೆ ಸರಿ. ಅಂಜುಮನ್ ಸಂಸ್ಥೆಗೆ ಬಾಡಿಗೆ ಕಟ್ಟಿದ ಬಗ್ಗೆ ಹಾಗೂ ಬಾಡಿಗೆ ಕರಾರು ಮಾಡಿಕೊಂಡ ಬಗ್ಗೆ ನನ್ನ ಬಳಿ ದಾಖಲೆ ಇದೆ. ಸದರಿ ಅಂಗಡಿ ಕುರಿತಾಗಿ ಎಷ್ಟು ವರ್ಷದ ಅವಧಿಯವರೆಗೆ ಬಾಡಿಗೆ ಕರಾರು ಮಾಡಿಕೊಂಡಿದ್ದೇವೆ ಎಂದರೆ ಬಾಡಿಗೆ ಅವಧಿ

ನಿರ್ಧರಿಸಿಕೊಂಡಿಲ್ಲ ಎಂದು ಹೇಳುತ್ತಾರೆ. ಇವತ್ತಿನವರೆಗೂ ನಾನು ಅಂಗಡಿ ಬಾಡಿಗೆಯನ್ನು ಅಂಜುಮನ್ ಸಂಸ್ಥೆಗೆ ನೀಡಿಲ್ಲ ಎಂದರೆ ಚೆಕ್ಕು ಮುಖಾಂತರ ಹಣ ಕಳುಹಿಸಿದರೂ ಸಹ ವಕ್ಫ ಬೋರ್ಡನವರು ಅದನ್ನು ನಗದೀಕರಣಗೊಳಿಸಿಕೊಂಡಿಲ್ಲ ಎಂದು ಹೇಳುತ್ತಾರೆ.

ಬಾಡಿಗೆ ಅಂಗಡಿ ಖಾಲಿ ಮಾಡಬೇಕು ಎಂದು ಅಂಜುಮನ್ ಸಂಸ್ಥೆಯವರು ನೋಟಿಸು ನೀಡಿದ್ದಾರೆ ಎಂದರೆ ಕ್ರಮ ತೆಗೆದುಕೊಂಡಿರಬಹುದು, ಆದರೆ ನೋಟಿಸು ಇನ್ನೂ ನನಗೆ ತಲುಪಿಲ್ಲ ಎಂದು ಹೇಳುತ್ತಾರೆ. ಚೆಕ್ಕು ಮೂಲಕ ಬಾಡಿಗೆ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ವಕೀಲರ ಮೂಲಕ ಕಳುಹಿಸಲಾಗಿತ್ತು ಎಂದು ಹೇಳುತ್ತಾರೆ.

ಸಯ್ಯದ್ ಅನ್ವರ್ ಸಯ್ಯದ್ ಅಲಿ ಸಾಃ ಕಾಕರಮಠರವರ ಪರಿಚಯ ಇದ್ದು, ಅವರ ಮನೆ ನಮ್ಮ ಮನೆಯ ಕಡೆ ಇರುತ್ತದೆ. 2017 ರಲ್ಲಿ ಸಯ್ಯದ್ ಅನ್ವರ್ ನಮ್ಮ ಮೇಲೆ ಕೇಸ್ ಮಾಡಿರುತ್ತಾರೆ ಎಂದರೆ ಸಾಕ್ಷಿ ಅಂಜುಮನ್ ಸಂಸ್ಥೆಗೆ ಸಂಬಂಧಿಸಿದ 23 ಲಕ್ಷ ಹಣ ಸಯ್ಯದ್ ಅನ್ವರ್ ಹಾಗೂ ಇತರರು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಸಲ್ಲಿಸಿದ ಪ್ರಕರಣಕ್ಕೆ ಈ ಮೇಲೆ ತಿಳಿಸಿದ ಪ್ರಕರಣ ದಾಖಲಾಗಿದೆ ಎಂದು ಹೇಳುತ್ತಾರೆ. ಸದರಿ ಪ್ರಕರಣ ಹೊರತುಪಡಿಸಿ ಬೇರೆ ಪ್ರಕರಣ ಯಾವುದು ಇರುವುದಿಲ್ಲ. 2016 ರಲ್ಲಿ ಮಂಜರ್ ಹುಸೇನ ಸಯ್ಯದ್ ನಮ್ಮ ಮೇಲೆ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣದ ಸಂಖ್ಯೆ 180/2016 ಇದೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಅಂಜುಮನ್ ಸಂಸ್ಥೆಯ ಕಚೇರಿಯ ಬೀಗ ಮುರಿದು, ಶಾದಿಮಾಲ್ ಕಟ್ಟಡದ ಖರ್ಚು

ವೆಚ್ಚಿನ ರೆಜಿಸ್ಟರ್ ಹಾಗೂ ರೂ. 15000/- ನಗದನ್ನು ಕದ್ದುಕೊಂಡು ಹೋಗಿರುವುದಾಗಿ ನನ್ನ ಹಾಗೂ ಇತರರ ಮೇಲೆ ಆಪಾದನೆ ಮಾಡಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಆಡಳಿತಾಧಿಕಾರಿಯವರು ಪೊಲೀಸರ ಸಹಾಯದಿಂದ ಬೀಗವನ್ನು ಒಡೆದು ತೆಗೆದು ಕಚೇರಿಯ ಆಡಳಿತ ನಿರ್ವಹಣೆಗೆ ನಮಗೆ ವಹಿಸಿದ್ದು, ಆ ಸಮಯದಲ್ಲಿ ಮೇಲೆ ತಿಳಿಸಿದ ರೆಜಿಸ್ಟರ್ ಹಾಗೂ ನಗದು ಹಣ ಅಲ್ಲಿ ಇರಲಿಲ್ಲ ಎಂದು ಹೇಳುತ್ತಾರೆ. ಸದರಿ ಬೀಗದ ಕೈ ತೆಗೆದುಕೊಡಲು ಆಡಳಿತಾಧಿಕಾರಿ ಮೇಲ್ವಿಚಾರಣೆಯಲ್ಲಿ ಪೊಲೀಸರು ನೇಮಕವಾಗಿದ್ದರು. ಆ ಸಮಯದಲ್ಲಿ ಆಡಳಿತಾಧಿಕಾರಿ ನೇಮಕವಾದ ಬಗ್ಗೆ ನಮ್ಮ ಬಳಿ ಪತ್ರ ಇರುತ್ತದೆ.

2016 ರಿಂದ 2018 ರ ಅವಧಿಯವರೆಗೆ ಅಂಜುಮನ್ ಸಂಸ್ಥೆಗೆ ನನ್ನನ್ನು ಹಾಗೂ ಉಳಿದ 13 ಜನರನ್ನು ಸಲಹಾ ಸಮಿತಿ ಸದಸ್ಯರನ್ನಾಗಿ ವಕ್ಫ ಬೋರ್ಡನವರು ನೇಮಿಸಿದ್ದರು. ಸದರಿ ನೇಮಕದ ಆದೇಶದ ಪ್ರತಿಯನ್ನು ನೀಡಿಲ್ಲ. ಸದರಿ ಸಲಹಾ ಸಮಿತಿಗೆ ನಾವು ನೇಮಕವಾಗುವ ಪೂರ್ವದಲ್ಲಿ ಸಯ್ಯದ್ ಮಂಜರ್ ಹುಸೇನ ಹಾಗೂ ಅಬ್ದುಲ್ ಅಜೀಜ್ ದೊಡ್ಮನಿ ಹಾಗೂ ಅವರ ಗುಂಪಿನವರು ಸಮಿತಿಯ ಸದಸ್ಯರಿದ್ದರು. ನಾವು ಸಲಹಾ ಸಮಿತಿಗೆ ನೇಮಕವಾಗುವ ಪೂರ್ವದಲ್ಲಿ 3 ನೇ ಪ್ರತಿವಾದಿ ಸಲಹಾ ಸಮಿತಿಯ ಸದಸ್ಯನಿರಲಿಲ್ಲ, ಆದರೆ ಮೊದಲಿನ ಸಮಿತಿ ಸದಸ್ಯರ ಬೆಂಬಲಿತ ವ್ಯಕ್ತಿ ಇರುತ್ತಾನೆ. ಮೊದಲಿನ ಸಮಿತಿಗಳ ಸದಸ್ಯರು ಅಂಜುಮನ್ ಸಂಸ್ಥೆಯ ಸದಸ್ಯರಿಂದ ಆಯ್ಕೆಯಾಗಿದ್ದರು ಎಂದರೆ ಸಾಕ್ಷಿ, ನಾವು ಸಲಹಾ ಸಮಿತಿಗೆ ನೇಮಕವಾದ ಪೂರ್ವದಲ್ಲಿ 20 ವರ್ಷಗಳವರೆಗೆ ಯಾವುದೇ ಚುನಾವಣೆ ಪ್ರಕ್ರಿಯೆಗಳು ನಡೆದಿಲ್ಲ ಎಂದು ಹೇಳುತ್ತಾರೆ. ಚುನಾವಣೆ

ಮಾಡಲು ನಾವು ಆ ಸಮಯದಲ್ಲಿ ಅರ್ಜಿ ನೀಡಿರಲಿಲ್ಲ. ಚುನಾವಣೆ ಮೂಲಕ ಸಮಿತಿಯ ಸದಸ್ಯರ ಆಯ್ಕೆಯಾಗಬೇಕು ಹಾಗೂ ಲೆಕ್ಕಪತ್ರ ಪರಿಶೀಲನೆ ಆಗಬೇಕು ಎಂದು ವಕ್ಫ ಬೋರ್ಡ್ ಗೆ ಹಾಗೂ ಲೋಕಾಯುಕ್ತರಿಗೆ ಅರ್ಜಿ ನೀಡಿದ್ದು, ಲೋಕಾಯುಕ್ತ ವಿಚಾರಣೆ ಆಗಿ 21 ಲಕ್ಷ ರೂ. ಹಣ ದುರ್ಬಳಕೆ ಆಗಿದೆ ಎಂದು ಅವಲೋಕಿಸಿ, ಇದ್ದ ಸಲಹಾ ಸಮಿತಿಯನ್ನು ತೆಗೆದುಹಾಕಿದ ನಂತರ ಚುನಾವಣೆ ಆಗಿ ಹೊಸ ಸಲಹಾ ಸಮಿತಿ ರಚನೆ ಆಗಿರುತ್ತದೆ. ಹಣ ದುರ್ಬಳಕೆ ಕುರಿತು ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಹಣ ದುರ್ಬಳಕೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆಡಳಿತಾಧಿಕಾರಿ 2016 ರಿಂದ 2018 ರವರೆಗೆ ಮಾತ್ರ ನಮಗೆ ನೇಮಿಸಿದ್ದು, ಚುನಾವಣೆ ನಂತರ ಆಯ್ಕೆಯಾದ ಸದಸ್ಯರು ಮುಂದುವರೆಸಿರುತ್ತಾರೆ. ಹೊಸ ಸಮಿತಿಯಲ್ಲಿ ಸಯ್ಯದ್ ಮಂಜರ್ ಹುಸೇನ, ಸಯ್ಯದ್ ಅನ್ವರ್ ಸಯ್ಯದ್ ಅಲಿ ಹಾಗೂ ಹೊಸ ಸದಸ್ಯರೂ ಸಹ ಆಯ್ಕೆಯಾಗಿದ್ದಾರೆ. 3 ನೇ ಪ್ರತಿವಾದಿ ಸದರಿ ಸಮಿತಿ ಸದಸ್ಯನಲ್ಲ ಎಂದರೆ ಸಾಕ್ಷಿ, ಆತನಿಗೆ ಜಿಲ್ಲಾ ವಕ್ಫ ಬೋರ್ಡಿನ ಸದಸ್ಯನನ್ನಾಗಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಯಾವ ವರ್ಷದಲ್ಲಿ 3 ನೇ ಪ್ರತಿವಾದಿಯನ್ನು ಜಿಲ್ಲಾ ವಕ್ಫ ಬೋರ್ಡಿನ ಸದಸ್ಯನನ್ನಾಗಿ ಮಾಡಲಾಗಿದೆ ಎಂದು ಮಾಹಿತಿ ಇಲ್ಲ, ಆದರೆ ಸಧ್ಯ ಸದಸ್ಯರಿದ್ದಾರೆ. ಸಮಾಜಸೇವೆ ಮಾಡುವ ವ್ಯಕ್ತಿಗಳನ್ನೇ ವಕ್ಫ ಬೋರ್ಡನವರು ಸದಸ್ಯರನ್ನಾಗಿ ಮಾಡಿಕೊಳ್ಳುತ್ತಾರೆ ಎಂದರೆ ಅಂಜುಮನ ಸಂಸ್ಥೆಯ ವತಿಯಿಂದ ಸದಸ್ಯರನ್ನು ನೇಮಕ ಮಾಡಲು ಕಳುಹಿಸುತ್ತಾರೆ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿಯನ್ನು ಪುರಸಭೆ

ಸದಸ್ಯನನ್ನಾಗಿ ನೋಮಿನೆಟ್ ಮಾಡಿಕೊಂಡಿದ್ದಾರೆ ಎಂದರೆ ಮಾಹಿತಿ ಇಲ್ಲ. ಪುರಸಭೆಯಲ್ಲಿ ಎಲ್ಲಾ ಪಂಗಡದ ಸದಸ್ಯರು ಆಯ್ಕೆಯಾಗಿರುತ್ತಾರೆ ಎಂದರೆ ಮಾಹಿತಿ ಇಲ್ಲ. ಸಮಾಜಸೇವೆ ಮಾಡುವ ವ್ಯಕ್ತಿಯನ್ನು ಮಾತ್ರ ಪುರಸಭೆಗೆ ನೋಮಿನೆಟ್ ಮಾಡಿಕೊಳ್ಳುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ.

ಸಮಾಜದಲ್ಲಿ ಒಳ್ಳೆಯ ವ್ಯಕ್ತಿಗೆ ಸನ್ಮಾನ ಮಾಡುತ್ತಾರೆ ಎಂದರೆ ಸರಿ. ನನಗೆ ಸರ್ಕಾರಿ ಬಿಬಿಎ ಕಾಲೇಜ ವತಿಯಿಂದ ಸನ್ಮಾನಿಸಿದ್ದಾರೆ. ಸಿಂಡಿಕೇಟ್ ಬ್ಯಾಂಕಿನ ಕಸ್ಟಮರ್ ಕೇರ್ ಅಧ್ಯಕ್ಷನನ್ನಾಗಿ ಮಾಡಿದ್ದಾರೆ. ಈ ಎಲ್ಲಾ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಯಾವುದಾದರೂ ಸಂಸ್ಥೆಯು ಸದಸ್ಯನನ್ನಾಗಿ ಮಾಡಿಕೊಂಡಿದ್ದಾರಾ ಎಂದರೆ ಸಿಂಡಿಕೇಟ್ ಬ್ಯಾಂಕಿನವರು ಮೇಲೆ ತಿಳಿಸಿದಂತೆ ಮಾಡಿದ್ದಾರೆ ಎಂದು ಹೇಳುತ್ತಾರೆ. ಬಿಬಿಎ ಕಾಲೇಜು  ಹಾಗೂ ಬ್ಯಾಂಕಿನವರು ನನ್ನ ವ್ಯವಹಾರದ ನಿಮಿತ್ತ ನನಗೆ ಕರೆಸಿದ್ದಾರೆ ಹೊರತು, ಸಮಾಜಸೇವೆ ಮಾಡಿದ್ದಕ್ಕಾಗಲ್ಲ ಎಂದರೆ ಸರಿಯಲ್ಲ.  ನನ್ನ ಹಾಗೂ ನನ್ನ ಮಕ್ಕಳ ನಡುವೆ ಆದ ಜಗಳದ ಪ್ರಕರಣವಿದೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.